# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

## ಸಿ.ಸಿ. ನಂ.07/2022

CW-1/PW-1

| | | |
|---|---|---|
| ಹೆಸರು | :- | ಸರೋಜಮ್ಮ |
| ಗಂಡನ ಹೆಸರು | :- | ಸಿದ್ದಪ್ಪ |
| ವಯಸ್ಸು | :- | 63 ವರ್ಷ |
| ವೃತ್ತಿ | :- | ಗೃಹಿಣಿ |
| ವಾಸ ಸ್ಥಳ | :- | ಕಗ್ಗಲಹಳ್ಳಿ |
| ದಿನಾಂಕ | :- | 22.06.2023 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿನಾಂಕ 06.10.2020 ರಂದು ನಾನು ಸಂಜೆ 4.00 ಗಂಟೆಗೆ ಮಂಚನಬೆಲೆಗೆ ಹೋಗುವ ರಸ್ತೆಯಲ್ಲಿ ನಮ್ಮ ಹೊಲದಲ್ಲಿ ದನ ಕಟ್ಟಿಹಾಕಿ ಬಂದು ಕುಳಿತುಕೊಂಡಿದ್ದೆನು. ಆಗ ಇಬ್ಬರು ಆಸಾಮಿಗಳು ಸ್ಕೂಟರ್‌ನಲ್ಲಿ ನಿಂತಿದ್ದು ನಂತರ ನಾನು ಕುಳಿತಿದ್ದ ಜಾಗಕ್ಕೆ ಸದರಿ ಇಬ್ಬರು ಆಸಾಮಿಗಳ ಪೈಕಿ ಒಬ್ಬ ಬಂದು ನನ್ನನ್ನು ಕುರಿತು ನೀರು ಬೇಕೆಂದು ಕೇಳಿದ್ದು, ಆಗ ನಾನು ನೀರಿಲ್ಲ, ಹೊಳೆಗೆ ಹೋಗುವಂತೆ ಹೇಳಿದ್ದು ಆ ಸಮಯದಲ್ಲಿ ಮತ್ತೊಬ್ಬ ಆಸಾಮಿ ಗಾಡಿಯ ಮೇಲೆ ಕುಳಿತಿದ್ದನು. ನನ್ನನ್ನು ನೀರು ಬೇಕೆಂದು ಕೇಳಿದ ಆಸಾಮಿ ನನ್ನ ಕುತ್ತಿಗೆಗೆ ಕೈ ಹಾಕಿ ನನ್ನ ಸರವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ನಾನು ಹಿಂದಕ್ಕೆ ಬಿದ್ದಿದ್ದು, ನನಗೆ ಜ್ಞಾನ ತಪ್ಪಿತ್ತು. ನನಗೆ ಜ್ಞಾನ ಬರುವಷ್ಟರಲ್ಲಿ ಸದರಿ ಆಸಾಮಿಗಳು ಅಲ್ಲಿ ಇರಲಿಲ್ಲ. ನಾನು ಎದ್ದು ನೋಡಿದಾಗ ನನ್ನ ಕತ್ತಿನಲ್ಲಿ ಏನೂ ಇರಲಿಲ್ಲ. ನನ್ನ ಕೈಯಲ್ಲಿ ತುಂಡಾಗಿದ್ದ ಸರ ಇತ್ತು. ಅಲ್ಲಿಂದ

ನಾನು ನನ್ನ ಗಂಡ ಇದ್ದ ಸ್ಥಳಕ್ಕೆ ಹೋದೆನು.

2. ಸದರಿ ಆಸಾಮಿಗಳ ವಯಸ್ಸು ಸುಮಾರು 23-24 ವರ್ಷ ಇರಬಹುದು. ಅವರು ಮುಖಕ್ಕೆ ಕಪ್ಪು ಮಾಸ್ಕ್ ಧರಿಸಿದ್ದ ಕಾರಣ ಅವರ ಚಹರೆಯ ಬಗ್ಗೆ ಹೇಳಲು ಗೊತ್ತಾಗುವುದಿಲ್ಲ. ನಾನು ಧರಿಸಿದ್ದ ಚಿನ್ನದ ಸರ 50 ಗ್ರಾಂ ತೂಕದ್ದಾಗಿತ್ತು. ಘಟನೆಯ ದಿನವೇ ನಾನು ದೂರನ್ನು ಕೊಟ್ಟಿದ್ದು, ದೂರನ್ನು ಹಾಗೂ ಅದರಲ್ಲಿನ ನನ್ನ ಸಹಿಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ದೂರನ್ನು **ನಿಪಿ-**1 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ-**1**(ಎ)** ಎಂದು ಗುರುತಿಸಲಾಯಿತು.

3. ದೂರನ್ನು ಕೊಟ್ಟ ನಂತರ ಪೊಲೀಸರು ಅದೇ ದಿನ ಘಟನಾ ಸ್ಥಳಕ್ಕೆ ಬಂದಿದ್ದರು. ಈಗ ನನಗೆ ತೋರಿಸಲಾದ ದಾಖಲೆಯಲ್ಲಿರುವ ಮೊದಲನೇ ಸಹಿ ನನ್ನದಿರುತ್ತದೆ. ಸದರಿ ದಾಖಲೆಯು ದಿನಾಂಕ 07.10.2020 ರ ಸ್ಥಳ ಪಂಚನಾಮೆಯಾಗಿದ್ದು ಅದನ್ನು **ನಿಪಿ-**2 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ-**2**(ಎ)** ಎಂದು ಗುರುತಿಸಲಾಯಿತು. ನಿಪಿ-2 ದಾಖಲೆಯನ್ನು ದೂರು ಕೊಟ್ಟ ಸಮಯದಲ್ಲಿ ಬರೆಯಲಾಗಿದ್ದು, ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿದೆ.

4. ದಿನಾಂಕ 06.10.2020 ರಂದು ದೂರನ್ನು ದಾಖಲಿಸಲು ಠಾಣೆಗೆ ಹೋದ ನಂತರದಲ್ಲಿ ನಾನು ಪೊಲೀಸ್ ಠಾಣೆಗೆ ಹೋಗಿದ್ದೆನು, ದೂರನ್ನು ಕೊಟ್ಟ 3-4 ತಿಂಗಳ ನಂತರ ನಾನು ಪೊಲೀಸ್ ಠಾಣೆಗೆ ಹೋಗಿದ್ದೆನು. ಆ

ಸಮಯದಲ್ಲಿ ಪೊಲೀಸರು ನನಗೆ ಠಾಣೆಯಲ್ಲಿದ್ದ 3-4 ಜನರನ್ನು ತೋರಿಸಿ ಸದರಿಯವರು ನಿಮ್ಮ ಸರವನ್ನು ಕದ್ದವರೇ ಎಂದು ನನ್ನನ್ನು ಕೇಳಿದರು. ಆಗ ನಾನು ನನ್ನ ಸರ ದೋಚಿದ ಆಸಾಮಿಗಳು ಮುಖಕ್ಕೆ ಕವಚ ಧರಿಸಿದ್ದ ಕಾರಣ ಅವರನ್ನು ಗುರುತಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದೆನು. ಪೊಲೀಸರು ಸದರಿ ಆಸಾಮಿಗಳ ಹೆಸರುಗಳನ್ನು ನನಗೆ ಹೇಳಿಲ್ಲ. ಘಟನೆಯ ಸಮಯದಲ್ಲಿ ಆರೋಪಿಗಳು ಬಂದಿದ್ದ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಪೊಲೀಸರು ಠಾಣೆಯಲ್ಲಿ ನನಗೆ ಸ್ಕೂಟರನ್ನು ತೋರಿಸಿದರು. ನಾನು ಅದನ್ನು ನೋಡಿ ಗುರುತಿಸಿದ್ದೆನು. ಆ ಸಮಯದಲ್ಲಿ ಪೊಲೀಸರು ನನಗೆ ನನ್ನ ಸರವನ್ನು ತೋರಿಸಿರುವುದಿಲ್ಲ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನನಗೆ ಪೊಲೀಸರು ಠಾಣೆಯಲ್ಲಿ ತೋರಿಸಿದ್ದರು.

5. ಈಗ ನನಗೆ ತೋರಿಸಲಾದ ಭಾವಚಿತ್ರದಲ್ಲಿನ ಬೈಕಿನಲ್ಲಿ ಆರೋಪಿಗಳು ಘಟನಾ ಸ್ಥಳಕ್ಕೆ ಬಂದಿದ್ದು. 2 ಭಾವಚಿತ್ರಗಳನ್ನು ಒಟ್ಟಾಗಿ **ನಿಪಿ-**3 ಎಂದು ಹಾಗೂ ಅವುಗಳಿಗೆ ಸಂಬಂಧಿಸಿದ ಸಿ.ಡಿಯನ್ನು **ನಿಪಿ-**4 ಎಂದು ಗುರುತಿಸಲಾಯಿತು

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ಘಟನೆಯ ಸಮಯದಲ್ಲಿ ನಾನು ಮಧ್ಯಾಹ್ನ 3.30 ರಲ್ಲಿ ದನ

ಮೇಯಿಸಿಕೊಂಡು ಕುಳಿತಿದ್ದೆನು ಎನ್ನುವುದು ನಿಜ. ಆ ಸಮಯದಲ್ಲಿ ಒಬ್ಬ ವಕ್ತಿ ನನ್ನ ಬಳಿ ಬಂದು ನನ್ನನ್ನು ಕೆಳಗೆ ತಳ್ಳಿ ನನ್ನ ಮೇಲೆ ಕುಳಿತುಕೊಂಡು ನಾನು ಹಾಕಿದ್ದ ಎರಡು ಎಳೆ ಚಿನ್ನದ ಸರವನ್ನು ಕಿತ್ತುಕೊಳ್ಳುತ್ತಿದ್ದಾಗ ನಾನು ಗಟ್ಟಿಯಾಗಿ ಚೈನನ್ನು ಹಿಡಿದುಕೊಂಡಾಗ ನನ್ನ ಬಳಿ ಚೈನಿನ ಒಂದು ತುಂಡು ಸಿಕ್ಕಿದ್ದು ಉಳಿದ ಚಿನ್ನದ ಚೈನನ್ನು ಆತ ಕಿತ್ತುಕೊಂಡು ಹೋಗಿದ್ದು ನನ್ನ ಬಳಿ ಉಳಿದುಕೊಂಡ ಮಾಂಗಲ್ಯದ ಸರದ ತುಂಡು 9.5 ಗ್ರಾಂ ತೂಕ ಇತ್ತು ಎನ್ನುವುದು ನಿಜ.

2. ನಾನು ದೂರನ್ನು ಕೊಟ್ಟ ಮರುದಿನ ಅಂದರೆ ದಿನಾಂಕ 07.10.2020 ರಂದು ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಬೆಳಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ ನಾನು ತೋರಿಸಿದ ಸ್ಥಳದಲ್ಲಿ ನಿಪಿ-2 ರಂತೆ ಪಂಚನಾಮೆಯನ್ನು ಮಾಡಿ ಸದರಿ ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡರು ಎನ್ನುವುದು ನಿಜ.

3. ದಿನಾಂಕ 14.08.2021 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ 1 ರಿಂದ 3 ನೇ ಆರೋಪಿಗಳನ್ನು ತೋರಿಸಿ ಸದರಿ ಆರೋಪಿಗಳು ನನ್ನ ಸರವನ್ನು ಕಿತ್ತುಕೊಂಡು ಹೋದದ್ದು ಎಂದು ಹೇಳಿದರು ಎನ್ನುವುದು ನಿಜ. ಆರೋಪಿಗಳು ನನ್ನ ಚಿನ್ನದ ಸರವನ್ನು ದೋಚಿ ಅದನ್ನು ಬೆಂಗಳೂರಿನ ಹಿಂದೂಸ್ತಾನ್ ಗೋಲ್ಡ್ ಕಂಪನಿಗೆ ಮಾರಾಟ ಮಾಡಿದ್ದು ಅದನ್ನು ವಿಲೇವಾರಿ ಮಾಡಿದ್ದರಿಂದ ಅದರ ಬದಲು 40.110 ಗ್ರಾಂ ಚಿನ್ನದ ಗಟ್ಟಿಯನ್ನು ನೀಡಿರುವುದನ್ನು ಅಮಾನತುಪಡಿಸಿದ ವಿಚಾರ ನನಗೆ ತಿಳಿಯಿತು ಎನ್ನುವುದು ಹಾಗೂ ಅದನ್ನು ಪೊಲೀಸರು ಆರೋಪಿಗಳಿಂದ ವಶಪಡಿಸಿಕೊಂಡು ಅದನ್ನು

ನನಗೆ ತೋರಿಸಿದರು ಎನ್ನುವುದು ನಿಜ.

ಪಾಟೀ ಸವಾಲು 1 ನೇ ಆರೋಪಿಯ ಪರ ವಕೀಲರಿಂದಃ-

ನಿಮಗೆ ಓದಲು ಹಾಗೂ ಬರೆಯಲು ಬರುತ್ತದೆಯೇ? ಎಂದರೆ ಸಾಕ್ಷಿಯು ನನಗೆ ಕೇವಲ ಸಹಿ ಮಾಡಲು ಮಾತ್ರ ಬರುತ್ತದೆ ಎಂದು ನುಡಿಯುತ್ತಾರೆ. ಪೊಲೀಸರು ಬರೆದ ದೂರಿಗೆ ನಾನು ಸಹಿ ಮಾಡಿರುವುದು ಎನ್ನುವುದು ನಿಜ. ಕಗ್ಗಲಹಳ್ಳಿ ಮಂಚನಬೆಲೆಗೆ ಹೋಗುವ ರಸ್ತೆಯಲ್ಲಿ ಬರುತ್ತದೆ ಎನ್ನುವುದು ನಿಜ. ಕಗ್ಗಲಹಳ್ಳಿಗೂ ಹಾಗೂ ನಮ್ಮ ಹೊಲಕ್ಕೂ ಸುಮಾರು ಅರ್ಧ ಕಿ.ಮೀ ಅಂತರವಿರುತ್ತದೆ. ನಮ್ಮ ಜಮೀನು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇದೆ ಎನ್ನುವುದು ನಿಜ. ರಾಮನಗರದಿಂದ ಮಂಚನಬೆಲೆಗೆ ಹಾಗೂ ಬೆಂಗಳೂರಿನ ಕಡೆ ಹೋಗುವವರು ಅದೇ ರಸ್ತೆಯ ಮೇಲೆ ಓಡಾಡುತ್ತಾರೆ ಎನ್ನುವುದು ನಿಜ. ನಾನು ನಮ್ಮ ಹೊಲದಲ್ಲಿ ಕುಳಿತಿದ್ದಾಗ ಒಬ್ಬ ವ್ಯಕ್ತಿ ನನ್ನ ಬಳಿ ಬಂದು ನೀರು ಬೇಕೆಂದು ಕೇಳಿದ ಎಂದು ಹೇಳಿದ ವಿಚಾರವನ್ನು ದೂರಿನಲ್ಲಿ ಬರೆಯಲಾಗಿದೆ. ನಾನು ಪ್ರಜ್ಞೆ ತಪ್ಪಿ ಬಿದ್ದ ಸುಮಾರು 10 ನಿಮಿಷಗಳ ನಂತರ ನನಗೆ ಪ್ರಜ್ಞೆ ಬಂದಿರುತ್ತದೆ. ನನಗೆ ಪ್ರಜ್ಞೆ ಬಂದಾಗ ನನ್ನ ಕತ್ತಿನಲ್ಲಿ ನನ್ನ ಸರ ಇರಲಿಲ್ಲ ಎನ್ನುವುದು ನಿಜ. ನಿಮಗೆ ಪ್ರಜ್ಞೆ ತಪ್ಪಿತ್ತು ಎಂದು ಹೇಳುವ ಕಾರಣ ನಿಮ್ಮ ಕತ್ತಿನಲ್ಲಿದ್ದ ಸರವನ್ನು ಯಾರು ಕಿತ್ತುಕೊಂಡು ಹೋದರು ಎಂದು ಹೇಳಲಾಗುವುದಿಲ್ಲ? ಎಂದರೆ ಸಾಕ್ಷಿಯು ನನ್ನ ಕುತ್ತಿಗೆಗೆ ಕೈ ಹಾಕಿ ನನ್ನ ಸರವನ್ನು ಕಿತ್ತಲೂ ಬಂದ ವ್ಯಕ್ತಿಯೇ ಅದನ್ನು ಕಿತ್ತುಕೊಂಡು ಹೋಗಿರುಬಹುದು ಎಂದು ನುಡಿಯುತ್ತಾರೆ. ನಾನು ಸದರಿ ವ್ಯಕ್ತಿ ನನ್ನ ಕುತ್ತಿಗೆಗೆ ಕೈ ಹಾಕಿದಾಗ ನಾನು ಪ್ರಜ್ಞೆ ತಪ್ಪಿದೆ ಎಂದು ಹೇಳಿದ ವಿಚಾರವನ್ನು ದೂರಿನಲ್ಲಿ ಬರೆಸಿಲ್ಲ

ಎನ್ನುವುದು ನಿಜ. ಘಟನೆಯ ಸಮಯದಲ್ಲಿ ನನ್ನ ಕುತ್ತಿಗೆಯ ಭಾಗದಲ್ಲಿ ಗಾಯವಾಗಿತ್ತು. ಅದರ ಸಂಬಂಧ ನೀವು ಚಿಕಿತ್ಸೆ ಪಡೆದುಕೊಂಡರೆ? ಎಂದರೆ ಸಾಕ್ಷಿಯು ಅದೇ ದಿನ ನನ್ನ ಇಸಿಜಿ ಮಾಡಿಸಲಾಗಿತ್ತು ಎಂದು ನುಡಿಯುತ್ತಾರೆ. ಘಟನೆಯ ಸಮಯದಲ್ಲಿ ನನ್ನ ಕುತ್ತಿಗೆಗೆ ಗಾಯಗಳಾಯಿತು ಎನ್ನುವುದನ್ನು ದೂರಿನಲ್ಲಿ ಬರೆಸಲಾಗಿದೆ. ನನ್ನ ಬಳಿ 9.5 ಗ್ರಾಂ ಚಿನ್ನದ ಸರದ ತುಂಡು ಉಳಿದಿತ್ತು ಎಂದು ನಾನು ಹೇಳಿದ್ದು ಪೊಲೀಸರು ಅದನ್ನು ನನ್ನಿಂದ ವಶಪಡಿಸಿಕೊಂಡಿರುತ್ತಾರೆ. ನಾನು ನನ್ನ ಚಿನ್ನದ ಸರದ ಚೀಟಿಯನ್ನು ಪೊಲೀಸರಿಗೆ ಕೊಟ್ಟಿದ್ದೆನು. ನನ್ನ ಬಳಿ ಬಂದಿದ್ದ ಆಸಾಮಿ ಜೀನ್ಸ್ ಪ್ಯಾಂಟ್ ಹಾಗೂ ಕಪ್ಪು ಚುಕ್ಕಿಯ ಶರ್ಟ್‌ನ್ನು ಧರಿಸಿದ್ದು ಆತ ಎಷ್ಟು ಎತ್ತರವಿದ್ದ ಎನ್ನುವುದನ್ನು ನಾನು ಪೊಲೀಸರು ಮುಂದೆ ಹೇಳಿದ್ದೇನೆ. ಸದರಿ ಅಸಾಮಿ ಬಂದಿದ್ದ ಕಪ್ಪು ಬಣ್ಣದ ಗಾಡಿಯಾಗಿತ್ತು. ನಿಪಿ-3 ರಲ್ಲಿ ಇರುವುದು ನೀಲಿ ಬಣ್ಣದ ಬೈಕ್ ಎನ್ನುವುದು ನಿಜ. ನಮ್ಮ ಜಮೀನಿನ ಅಕ್ಕಪಕ್ಕದಲ್ಲಿ ಬೇರೆಯವರ ಹೋಲಗಳಿವೆ ಎನ್ನುವುದು ನಿಜ. ನಮ್ಮ ಜಮೀನಿಂದ ಕೆಳಗೆ ಹೋದರೆ ಹೋಳೆಯ ಕಡೆ ಹೋಗುತ್ತದೆ ಎನ್ನುವುದು ನಿಜ. ಸಾಮಾನ್ಯವಾಗಿ 3.30 ರಿಂದ 4.00 ಗಂಟೆಯ ಸಮಯದಲ್ಲಿ ರೈತರು ವ್ಯವಸಾಯ ಮಾಡುತ್ತಿರುತ್ತಾರೆ ಎನ್ನುವುದು ನಿಜ. ನಮ್ಮ ಹೋಲದ ಬಳಿ ಏನಾದರು ಗಲಾಟೆಯಾದರು ಜನ ಸೇರುತ್ತಾರೆ ಎನ್ನುವುದು ನಿಜ. ನೀವು ಸಹಿ ಮಾಡಿರುವುದು ಠಾಣೆಯಲ್ಲಿ? ಎಂದರೆ ಸಾಕ್ಷಿಯು ಠಾಣೆಯಲ್ಲಿ ಹಾಕಿದ್ದೇನು ಹಾಗೂ ಘಟನ ಸ್ಥಳದ ಬಳಿಯು ಹಾಕಿದ್ದೇನು ಎಂದು ನುಡಿಯುತ್ತಾರೆ. ಪೊಲೀಸರು ನಿಮಗೆ 41 ಗ್ರಾಂ ಚಿನ್ನದ ಗಟ್ಟಿಯನ್ನು ಕೊಟ್ಟರೆ? ಎಂದರೆ ಸಾಕ್ಷಿಯು 29 ಗ್ರಾಂ ಗಟ್ಟಿಯನ್ನು ಕೊಟ್ಟರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಪೊಲೀಸರು ಭಾವಚಿತ್ರವನ್ನು

ತೆಗೆದಿರುತ್ತಾರೆ.

2. ಆರೋಪಿಗಳಿಗೂ ಹಾಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ? ಎಂದರೆ ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಗಳೇ ಆಗಿರಬಹುದು ಎಂದು ನುಡಿಯುತ್ತಾರೆ. ದೂರಿನಲ್ಲಿ ಹಾಗೂ ನಿಮ್ಮ ಹೇಳಿಕೆಯಲ್ಲಿ ಇಬ್ಬರು ಆಸಾಮಿಗಳಿದ್ದರು ಎಂದು ಹೇಳಿದ್ದು ನ್ಯಾಯಾಲಯದ ಮುಂದೆ 3 ಜನ ಆರೋಪಿಗಳಿದ್ದಾರೆ? ಎಂದರೆ ಸಾಕ್ಷಿಯು ಇಬ್ಬರೆ ಇದ್ದದ್ದು ಎಂದು ನುಡಿಯುತ್ತಾರೆ. ಪೊಲೀಸರು ಘಟನ ಸ್ಥಳಕ್ಕೆ ಬಂದು ಮಹಜರ್ ಮಾಡಿದರು ಎಂದು ಹೇಳುತ್ತಿರುವ ವಿಚಾರ ಸುಳ್ಳು ಎನ್ನುವುದು ಸರಿಯಲ್ಲ. ಪೊಲೀಸರು ಮುಂದು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ಚಿನ್ನ ಕೊಡುವುದಾಗಿ ಹೇಳಿ ಇದೇ ಆರೋಪಿತರನ್ನು ಗುರುತಿಸುವಂತೆ ಹೇಳಿದ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಇದೇ ಮೊದಲ ಬಾರಿಗೆ ನೀವು ನೋಡುತ್ತಿರುವುದು? ಎಂದರೆ ಸಾಕ್ಷಿಯು ಠಾಣೆಯಲ್ಲಿ ತೋರಿಸಿದರು ಎಂದು ನುಡಿಯುತ್ತಾರೆ.

3. ಪೊಲೀಸರು ಠಾಣೆಯಲ್ಲಿ ನನಗೆ ಆರೋಪಿಗಳನ್ನು ಘಟನೆಯಾದ 5-6 ತಿಂಗಳ ನಂತರ ತೋರಿಸಿದ್ದರು. ಆರೋಪಿಗಳನ್ನು ನಾನು ಠಾಣೆಯಲ್ಲಿ ನಾನು ನೋಡಿಲ್ಲ ಎನ್ನುವುದು ಹಾಗೂ ಈ ದಿನವೇ ಮೊದಲ ಬಾರಿಗೆ ಅವರನ್ನು ನ್ಯಾಯಾಲಯದಲ್ಲಿ ನೋಡುತ್ತಿರುವುದು ಎನ್ನುವುದು ಸರಿಯಲ್ಲ.

2 ಮತ್ತು 3 ನೇ ಆರೋಪಿಗಳ ಪರ ವಕೀಲರು 1 ನೇ ಆರೋಪಿಯ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.